# ಕಾಡುವ ರೂಪಕಗಳು

ಮೌಖಿಕ ಮತ್ತು ಸಾಹಿತ್ಯಿಕ ಪಠ್ಯಗಳಲ್ಲಿ ನಮ್ಮನ್ನು ಮತ್ತೆ ಮತ್ತೆ ಕಾಡುವ, ಕದಡುವ ರೂಪಕ, ಉಪಮೆಗಳು ನಮ್ಮೊಳಗೆ ಆಳವಾಗಿ ನೆಲೆಯೂರಿರುತ್ತವೆ. ಎಲ್ಲ ಋತುಮಾನಗಳಲ್ಲೂ, ಎಲ್ಲ ಸಂದರ್ಭದಲ್ಲೂ ಇವು ನಮ್ಮ ತಿಳಿವನ್ನು ನವೀಕರಿಸುತ್ತಾ ಹೊಸತಾಗಿ ಗೋಚರಿಸುತ್ತಿರುತ್ತವೆ. ಅದರಲ್ಲೂ ತಾಯಿ ಮತ್ತು ಮಕ್ಕಳ ಸಂಬಂಧವನ್ನು ರುಜುವಾತುಗೊಳಿಸುವ ಘಟನೆಗಳನ್ನು ಬಹುಪಾಲು ಜಗತ್ತಿನ ಎಲ್ಲ ಭಾಷೆಯ ಸಂಸ್ಕೃತಿ ಮತ್ತು ಸಾಹಿತ್ಯದ ಕೇಳಿಕೆಗಳಲ್ಲಿ ಅರಿತಿದ್ದೇವೆ. ಗ್ರಹಿಕೆಯ ಎಲ್ಲ ದಾರಿಗಳು ಸವಕಲಾದಾಗ ರೂಪಕ, ಉಪಮೆಗಳು ಭಾಷೆಯನ್ನು ಚೈತನ್ಯಗೊಳಿಸುತ್ತವೆ. ಈ ಅರ್ಥದಲ್ಲಿ ಕಾಳಿದಾಸ ಮತ್ತು ಕುಮಾರವ್ಯಾಸರ ಕೃತಿಗಳು ರೂಪಕದ ಕಡಲು.

ನಾನು ಕೇಳಿರುವ ಮೌಖಿಕ ಕತೆಯೊಂದು ಹೀಗಿದೆ: ಒಂದು ಸಲ ದೂರ್ವಾಸನಂಥ ಮುನಿಯೊಬ್ಬ ಇಡೀ ಭೂಮಂಡಲದಿಂದಲೇ ಮಾದಿಗರನ್ನು ಇಲ್ಲವಾಗಿಸಬೇಕು ಎಂಬ ಛಲದಿಂದ ಆಯುಧ ಹಿಡಿದು ಎಲ್ಲರನ್ನೂ ನಿರ್ದಯವಾಗಿ ತರಿದುಹಾಕುತ್ತಾ ಬರುತ್ತಿದ್ದ. ಆಗ ಓರ್ವ ಮಾದಿಗರ ಹೆಣ್ಣು ತನ್ನ ಕೂಸಿನೊಂದಿಗೆ ಮುನಿಯಿಂದ ತಪ್ಪಿಸಿಕೊಂಡು ಓಡೋಡಿ ಬರುತ್ತಿದ್ದಳು. ಒಂದು ನೀರಿನ ಸರುವಿನ ಹತ್ತಿರ ಮಡಿವಾಳರ ಹೆಣ್ಣೊಂದು ಬಟ್ಟೆ ಸೆಣೆಯುತ್ತಿತ್ತು. ಅಲ್ಲಿಗೆ ಬಂದ ಮಾದಿಗರ ಹೆಣ್ಣು 'ಅವ್ವಾ ನಾನು ಬರೋವರೆಗೂ ಈ ಕೂಸನ್ನು ನಿನ್ನ ಹೊಟ್ಟೆಯಲ್ಲಿ ಹುಟ್ಟಿದ ಕೂಸೆಂದೇ ತಿಳಿದು ಜ್ವಾಪಾನದಿಂದ ನೋಡಿಕೊಳ್ಳವ್ವ. ನಾನು ಬದುಕುಳಿದರೆ ಈ ಕೂಸನ್ನು ತೆಗೆದುಕೊಂಡ ಹೋಗಲು ಬರುತ್ತೇನೆ' ಎಂದು ನಡೆದಿದ್ದೆಲ್ಲವನ್ನೂ ಹೇಳಿ ಮರೆಯಾದಳು. ಆ ಮಗುವನ್ನು ಮಡಿವಾಳರ ಹೆಣ್ಣು ಕವುಚಿಹಾಕಿದ್ದ ಬಾನಿಯೊಳಗೆ ಬಚ್ಚಿಟ್ಟಳು. ಇದಾದ ಕೆಲವೇ ಹೊತ್ತಿನ ನಂತರ ಕೋಪದಿಂದ ಬಂದ ಆ ಮುನಿ ಮಡಿವಾಳ ಹೆಂಗಸನ್ನು 'ಮಗುವನ್ನೆತ್ತಿಕೊಂಡು ಓಡಿಬಂದ ಹೆಣ್ಣೊಬ್ಬಳನ್ನು ಕಂಡೆಯಾ?' ಎಂದು ಕೇಳಿದ. ಆ ಹೆಣ್ಣು 'ಯಾವ ಹೆಣ್ಣೂ ಈ ಕಡೆ ಬಂದಿಲ್ಲ ಸ್ವಾಮಿ' ಎಂದಳು.

ಇದಾದ ಕೆಲವು ವರ್ಷಗಳ ನಂತರ ಬದುಕುಳಿದ ಮಾದಿಗರ ಹೆಣ್ಣು ತನ್ನ ಮಗುವನ್ನು ಪಡೆದುಕೊಳ್ಳಲು ಮಡಿವಾಳಗಿತ್ತಿಯ ಬಳಿಗೆ ಬಂದು, ಮಗುವನ್ನು ತನಗೆ ಮರಳಿಸಬೇಕೆಂದು ಕೇಳಿಕೊಂಡಳು. ಪ್ರಾಣದಂತೆ ಸಾಕಿದ್ದ ಮಗುವನ್ನು ನಿನಗೆ ಕೊಡಲಾರೆ ಎಂದು ಮಡಿವಾಳಗಿತ್ತಿ ಹೇಳಿದಳು. ಮಗುವಿಗಾಗಿ ಅವರಿಬ್ಬರಲ್ಲಿ ವಾದ–ವಿವಾದಗಳು ನಡೆದು, ಕೊನೆಗೆ ಅದು ಕಟ್ಟೆಮನೆವರೆಗೂ ಬಂದಿತು. ನ್ಯಾಯವಾದಿಗಳು ಈ ಗೊಂದಲವನ್ನು ಬಗೆಹರಿಸಲು ಸೋತು, ಒಂದು ನಿರ್ಣಯಕ್ಕೆ ಬಂದರು. ಏಳು ತೆರೆಗಳನ್ನು ಕಟ್ಟಿ ಅದರಾಚೆಗೆ ಮಗುವನ್ನು ನಿಲ್ಲಿಸುವುದು. ಯಾರ ಎದೆಹಾಲು ಮಗುವಿನ ಬಾಯಿಗೆ ಬೀಳುತ್ತದೋ ಅವರೇ ಆ ಮಗುವಿನ ನಿಜವಾದ ತಾಯಿ ಎಂದು ನಿರ್ಣಯಿಸಿದರು. ಮಾದಿಗರ ಹೆಣ್ಣಿನ ಎದೆಹಾಲು ಕೂಸಿನ ಬಾಯಿಯವರೆಗೂ ಹೋಗಲಿಲ್ಲ! ಆದರೆ ಅಗಸರ ಹೆಣ್ಣಿನ ಎದೆಹಾಲು ಏಳು ತೆರೆಗಳಾಚೆ ನಿಂತಿದ್ದ ಮಗುವಿನ ಬಾಯಿಗೆ ಹರಿಯಿತು. ಆಗ ನ್ಯಾಯವಾದಿಗಳು ಆ ಕೂಸಿನ ನಿಜವಾದ ತಾಯಿ ಅಗಸರ ಹೆಣ್ಣು ಎಂದೇ ನಿರ್ಣಯಿಸಿದರು. ಆದರೂ ಅಗಸರ ಹೆಣ್ಣು ಆ ತಾಯಿಯ ಸಂಕಟವನ್ನು ನೋಡಲಾಗದೆ ಮಗುವನ್ನು ಅವಳಿಗೆ ಹಿಂದಿರುಗಿಸಿದಳು. ಹೀಗೆ 'ದರ್ಶನ'ದ ಮೌಲ್ಯವನ್ನು ಉನ್ನತೀಕರಿಸುವುದೇ ರೂಪಕಗಳು ಮಾಡುವ ಬಹುದೊಡ್ಡ ಪರಿವರ್ತನೆಗಳು.

ಜುಂಜಪ್ಪನ ಮೌಖಿಕ ಕಾವ್ಯದಲ್ಲೂ ಇಂತಹುದೇ ಘಟನೆಯೊಂದು ಪುನರಾವರ್ತನೆಯಾಗುತ್ತದೆ. ಒಂದು ಘಟ್ಟದಲ್ಲಿ ಜುಂಜಪ್ಪ ತನ್ನ ಮಗನೇ ಎಂದು ಸಿನ್ನಮ್ಮ ಸಾಬೀತುಗೊಳಿಸುವ ಸಂದರ್ಭ ಬರುತ್ತದೆ. ಆಗ ಜುಂಜಪ್ಪ ತನ್ನ ತಾಯಿ ಆರೋಪದಿಂದ ಮುಕ್ತಳಾಗಿ ಪರಿಶುದ್ಧವಾಗಿ ಹೊರಬರಲಿ ಎಂಬ ಕಾರಣಕ್ಕಾಗಿ ಹಲವಾರು ಪರೀಕ್ಷೆಗಳನ್ನು ತನ್ನ ತಾಯಿಗೆ ಒಡ್ಡುತ್ತಾನೆ. ಅವುಗಳಲ್ಲಿ ತನ್ನ ತಾಯಿ ಮತ್ತು ತನ್ನ ನಡುವೆ ಏಳು ತೆರೆಗಳನ್ನು ಕಟ್ಟುವುದು. ಆ ತೆರೆಗಳನ್ನು ದಾಟಿ ನನ್ನ ತಾಯಿಯ ಎದೆಹಾಲು ನನ್ನ ಬಾಯೊಳಗೆ ಬೀಳಬೇಕು ಎಂಬ ಷರತ್ತನ್ನು ಒಡ್ಡುತ್ತಾನೆ. ಅವನ ಷರತ್ತಿನಂತೆ ಏಳು ತೆರೆಗಳನ್ನು ಕಟ್ಟಿ ಅದರ ಒಂದು ತುದಿಯಲ್ಲಿ ಸಿನ್ನಮ್ಮ ಮತ್ತೊಂದು ತುದಿಯಲ್ಲಿ ಜುಂಜಪ್ಪ ನಿಲ್ಲುತ್ತಾನೆ. ಆಗ ಸಿನ್ನಮ್ಮನ ಎದೆಹಾಲು ಏಳು ತೆರೆಗಳ ಆಚೆ ನಿಂತಿದ್ದ ಜುಂಜಪ್ಪನ ಬಾಯಿಗೆ ಹರಿಯುತ್ತದೆ. ಆಗ ಎಲ್ಲರ ಶಂಕೆ ದೂರವಾಗುತ್ತದೆ. ಹೀಗೆ ವಾಚ್ಯಾರ್ಥಗಳು ಕ್ಲೀಷೆಯಾದಾಗ ರೂಪಕಗಳು ಮಿಂಚಿನಂತೆ ಭಾಷೆಯ ಸವಕಲು ಬಳಕೆಯಿಂದ ಹೊರಬಂದು ದಾರಿ ಬೆಳಗಿಸುತ್ತವೆ.

ಬರ್ಟೋಲ್ಟ್ ಬ್ರೆಕ್ಟ್‌ನ 'ಕಕೇಷಿಯನ್ ಚಾಕ್ ಸರ್ಕಲ್' ನಾಟಕದಲ್ಲೂ ಸಾಕುತಾಯಿ ಹಾಗೂ ಹೆತ್ತ ತಾಯಿಯ ನಡುವೆ ಇಂತಹುದೇ ಘಟನೆ ಬೇರೊಂದು ರೀತಿಯಲ್ಲಿ ವ್ಯಕ್ತಗೊಂಡಿದೆ. ಇವುಗಳೆಲ್ಲ ವಿವಿಧ ಕಾಲ ದೇಶಗಳಲ್ಲಿ, ಸಂಸ್ಕೃತಿಗಳಲ್ಲಿ ರೂಪುಗೊಂಡ ಘಟನೆಗಳಾಗಿದ್ದರೂ ಅವುಗಳು ನೀಡುವ ಮಾನವೀಯ 'ದರ್ಶನ' ಒಂದೇ. ಹಾಗೆಯೇ ಕಾಳಿದಾಸನ 'ಅಭಿಜ್ಞಾನ ಶಾಕುಂತಲ' ನಾಟಕದಲ್ಲೂ ಉತ್ಕಟ ಮಾನವೀಯ ಘಟನೆಗಳಿವೆ. ಕಣ್ವರ ಆಶ್ರಮವನ್ನು ತೊರೆದು ದುಷ್ಯಂತನ ಅರಮನೆಗೆ ಹೊರಟು ನಿಂತ ಶಾಕುಂತಲೆ ಕಣ್ವರಿಗೆ 'ಪರ್ಣಶಾಲೆಯಲ್ಲಿ ಗರ್ಭಿಣಿಯಾಗಿರುವ ಹುಲ್ಲೆಗೆ ಸುಖ ಪ್ರಸವವಾದಾಗ ನನಗೆ ಕುಶಲ ಪತ್ರಿಕೆ ಕಳುಹಿಸಿಕೊಡಿ' ಎಂದು ಹೇಳಿ ಹೊರಡುವ ವೇಳೆಗೆ ಹುಲ್ಲೆ ಮರಿಯೊಂದು ಅವಳ ಸೆರಗು ಹಿಡಿದು ಎಳೆಯುತ್ತಿರುತ್ತದೆ. ಆಗ ಕಣ್ವರು 'ಮಗನ ಹಾಗೆ ನೀನು ಯಾರನ್ನು ಪ್ರೀತಿಯಿಂದ ಸಾಕಿದೆಯೋ ಆ ಜಿಂಕೆಯ ಮರಿ ಇಂದು ನಿನಗೆ ದಾರಿ ಬಿಡುತ್ತಿಲ್ಲ!' ಎಂದು ಹೇಳುತ್ತಾರೆ. ಮಾರ್ಕ್ವೆಸ್‌ನ 'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್' ಕಾದಂಬರಿಯಲ್ಲಿ, ಕೊಲೆಗೀಡಾದ ವ್ಯಕ್ತಿಯೊಬ್ಬನ ರಕ್ತ ಊರೆಲ್ಲಾ ಸುತ್ತಿ ಕೊನೆಗೆ ಅದು ಅವನ ತಾಯಿಯ ಕಡೆ ಹರಿದು ಬರುತ್ತದೆ! ಇವೆಲ್ಲ ಕಾಡುವ ರೂಪಕಗಳೇ. ವಾಚ್ಯಾರ್ಥಗಳು ಸವಕಲಾದಾಗ ರೂಪಕ, ಉಪಮೆಗಳು ಮಿಂಚಿನಂತೆ ಅರಿವನ್ನು ಹಿಗ್ಗಿಸುತ್ತವೆ.

ಒಂದು ಕೃತಿಯ ದರ್ಶನವನ್ನು ಋಜುಗೊಳಿಸುವ ಮತ್ತು ಕೃತಿಯ ಲೋಕದಲ್ಲಿ ಸಂವಹನ ಸಾಧಿಸಲು ರೂಪಕಗಳು, ಉಪಮೆಗಳು ನೆರವಾಗುವುದು ಮಾತ್ರವಲ್ಲ, ಕಾಲ ದೇಶಗಳನ್ನು ದಾಟಿ ನಮ್ಮ ನೆನಪಿನಲ್ಲಿ ಉಳಿಯುತ್ತವೆ. ಅಂತಿಮವಾಗಿ ರೂಪಕಗಳಿಲ್ಲದ ಭಾಷೆಯೇ ಇಲ್ಲ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ವರ್ಣ ಜಾತಿ ವರ್ಗಗಳನ್ನು ಆ ದೇವರೇ ಸೃಷ್ಟಿ ಮಾಡಿದ್ದರೂ ಅವನ್ನೆಲ್ಲ ಇಂದು ಸರ್ವೋದಯಕ್ಕಾಗಿ ನಾವು ಧ್ವಂಸ ಮಾಡಬೇಕಾಗುತ್ತದೆ. ಕಾಲರಾ, ಪ್ಲೇಗು, ಮಲೇರಿಯಾಗಳನ್ನು ದೇವರೇ ಸೃಷ್ಟಿ ಮಾಡಿದ್ದು ಅಂತ ಹೇಳಿ ನಾವು ಸುಮ್ಮನಿರುವುದಕ್ಕೆ ಆದೀತೆ? ಅನಾರೋಗ್ಯಕರವೂ ಮೃತ್ಯುಕರವೂ ಆಗಿರುವ ಅವನ್ನೆಲ್ಲ ನಾಶಪಡಿಸಿ ನಮ್ಮ ಆರೋಗ್ಯವನ್ನು ನಾವು ರಕ್ಷಿಸಿಕೊಳ್ಳುವಂತೆ ವರ್ಣ ಜಾತಿ ವರ್ಗ ಮೊದಲಾದ ದುರ್ಭಾವನೆಗಳನ್ನೆಲ್ಲ ಧ್ವಂಸ ಮಾಡಿ ಸಮಾಜ ಕ್ಷೇಮವನ್ನು ಸಾಧಿಸಬೇಕು.

  — ಕುವೆಂಪು
- ಜೀವನವು ಹೋರಾಟದ ಕಣ. ಹೋರಾಟದ ಮೂಲಕವೇ ನಾವು ಮುಂದಕ್ಕೆ ಸಾಗಬೇಕಿದೆ.

  —ಸ್ವಾಮಿ ವಿವೇಕಾನಂದ
- ನೀರು ಕಾಲ ಬುಡಕ್ಕೆ ಬಂದಾಗಲೇ ಅದರಿಂದ ಪಾರಾಗಲು ನೀವು ಏನನ್ನಾದರೂ ಮಾಡಬೇಕೇ ಹೊರತು, ನಿಮ್ಮ ಕುತ್ತಿಗೆ ತನಕ ಬರುವವರೆಗೆ ಕಾಯುತ್ತಾ ಕೂರುವುದಲ್ಲ.

  —ಚೆನುವಾ ಆಷಿಬೆ
- ಸಿದ್ಧನಾಗಿರುವ ಒಂದು ದಿನ ನಿನ್ನ ಅವಕಾಶ ಬಂದೇ ಬರುತ್ತದೆ.

  —ಅಬ್ರಹಾಂ ಲಿಂಕನ್
- ಜೀವನದಲ್ಲಿ ಎಲ್ಲ ಸಂಗತಿಗಳೂ ಸುಲಭವಾಗಿ ಘಟಿಸುವುದಿಲ್ಲ. ಮನುಷ್ಯ ಮಾನವನಾಗುವುದಕ್ಕೂ ಹೆಣಗುತ್ತಾನೆ.

  —ಮಿರ್ಜಾ ಗಾಲಿಬ್